**ಸಾಕ್ಷಿಯನ್ನು ದಿನಾಂಕ 22.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಕೆ ವಕೀಲರಿಂದಃ**

1. ನಿ.ಪಿ.–5 ರಂತೆ ನಾನು ಹಾಜರುಪಡಿಸಿರುವ ದಾಖಲೆ ಪ್ರಕಾರ ಸರ್ವೆ ನಂಬರ್ 31 ರಲ್ಲಿರುವ ಬ್ಲಾಕ್ ನಂಬರ್ 16 ರ ಜಮೀನಿಗೆ ಅದೇ ದಾಖಲೆಯಲ್ಲಿ ಚಕ್ಕುಬಂಧಿ ಕಾಣಿಸಲಾಗಿದೆ ಎಂದರೆ ಸರಿ. ಸದರಿ ಚಕ್ಕುಬಂಧಿಯನ್ನು ಯಾವ ಆಧಾರದಲ್ಲಿ ಗುರುತಿಸಲಾಗಿದೆ ಎಂದರೆ ಸಾಕ್ಷಿ ನಕಾಶೆ ಆಧಾರದಲ್ಲಿ ಬರೆಯಲಾಗಿದೆ ಎನ್ನುತ್ತಾರೆ. ನಿ.ಪಿ.–5 ರ ನಕಾಶೆ ಸರಿ ಇದೆಯೇ ಎಂದರೆ ಸಾಕ್ಷಿ ಸದರಿ ನಕಾಶೆ ಕಚ್ಚಾ ನಕಾಶೆಯಾಗಿದೆ ಮತ್ತು ಸರಿ ಇದೆ ಎನ್ನುತ್ತಾರೆ. ಸದರಿ ನಕಾಶೆಯಲ್ಲಿ ಬ್ಲಾಕ್ ನಂಬರ್ 16 ರ ಸುತ್ತ ಮುತ್ತ ಯಾವ ಜಮೀನು ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.–5 ರಲ್ಲಿನ ಚಕ್ಕುಬಂಧಿಯನ್ನು ಯಾವ ಆಧಾರದಲ್ಲಿ ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.
2. ನಿ.ಪಿ.–25 ರ ದಾಖಲೆ ಯಾವ ಉದ್ದೇಶಕ್ಕೆ ಮಾಡಲಾಗಿದೆ ಎಂದರೆ ಸಾಕ್ಷಿ ಸದರಿ ನಕಾಶೆ ಸರ್ವೆ ನಂಬರ್ 31 ರಲ್ಲಿರುವ ಸಂಪೂರ್ಣ 385 ಎಕರೆ ಜಮೀನಿಗೆ ಸಂಬಂಧಪಟ್ಟ ನಕಾಶೆಯಾಗಿದೆ ಎನ್ನುತ್ತಾರೆ. ಸದರಿ ನಕಾಶೆಯಲ್ಲಿ ಯಾವ ಯಾವ ಹಿಡುವಳಿದಾರರು ಎಲ್ಲೆಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ನಕಾಶೆ ಪ್ರಕಾರ ಸರ್ವೆ ನಂಬರ್ 31 ರ ದಕ್ಷಿಣ ದಿಕ್ಕಿಗೆ ಎಡಹಳ್ಳಿ ಗ್ರಾಮದ ಗಡಿ ಇದೆ ಎಂದರೆ ಸರಿ. ಎಡಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಿರುವ ಸರ್ವೆ ನಂಬರ್ 31 ರಲ್ಲಿ ನನಗೆ ಜಮೀನು

ಮಂಜೂರಾಗಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಮಲ್ಲಿಗೆನಹಳ್ಳಿ ಗಡಿಯಲ್ಲಿ ಆಗಿದೆ ಎನ್ನುತ್ತಾರೆ.

3. ನಿ.ಪಿ.–24 ರ ನಕಾಶೆಯನ್ನು ನಮಗೆ ಸಾಗುವಳಿ ಚೀಟಿ ಕೊಡುವಾಗ ತಯಾರಿಸಲಾಗಿದೆ.

4. ನಿ.ಪಿ.– 5, 24 ಮತ್ತು 25 ರ ನಕಾಶೆಗಳ ಪೈಕಿ ಯಾವ ನಕಾಶೆಗೆ ಅನುಗುಣವಾಗಿ ನಿಮ್ಮ ಜಮೀನು ಮಂಜೂರು ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಿ.ಪಿ.–24 ನಮ್ಮ ಜಮೀನಿಗೆ ಸಂಬಂಧಪಟ್ಟ ನಕಾಶೆಯಾಗಿದೆ ಎನ್ನುತ್ತಾರೆ. ನಿ.ಪಿ.–24 ರ ನಕಾಶೆಯಲ್ಲಿ ತೋರಿಸಲಾಗಿರುವ ಸರ್ವೆ ನಂಬರ್ 31 ರಲ್ಲಿರುವ ಬ್ಲಾಕ್ ನಂಬರ್ 16 ರ ಜಮೀನನ್ನು ನನಗೆ ಮಂಜೂರು ಮಾಡಲಾಗಿದೆ. ನನ್ನ ವಾದ ಪತ್ರದಲ್ಲಿ ನನ್ನ ಜಮೀನಿನ ದಕ್ಷಿಣ ಭಾಗಕ್ಕೆ ಎಡಹಳ್ಳಿ ಗಡಿ ಬರುತ್ತದೆ ಎಂದು ನಾನು ಬರೆಸಿಲ್ಲ. ನನ್ನ ಜಮೀನಿನಿಂದ ಎಡಹಳ್ಳಿ ಗ್ರಾಮದ ಗಡಿ 2 ಕಿ.ಮೀ ದೂರದಲ್ಲಿದೆ. ನನಗೆ ಮಂಜೂರಾಗಿದೆ ಎನ್ನಲಾದ ಜಮೀನಿಗೆ ಸಂಬಂಧಪಟ್ಟ ಚಕ್ಕುಬಂಧಿಯನ್ನು ತಪ್ಪಾಗಿ ವಾದ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನನ್ನು ಸೇರಿಸಿ ಉತ್ತರ ದಿಕ್ಕಿನ ಚಕ್ಕುಬಂಧಿಯನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ 1 ನೇ ಪ್ರತಿವಾದಿಗೆ ಮಂಜೂರಾದ 20 ಗುಂಟೆ ಜಮೀನು ಇದ್ದು ಆ ನಂತರ ನಾಲೆ ಇದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಕಾಶೆ ದಾಖಲೆಗಳಿಗೂ ಮತ್ತು ವಾದ ಪತ್ರದಲ್ಲಿ ನಾನು ಉಲ್ಲೇಖಿಸಿರುವ ಚಕ್ಕುಬಂಧಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾಲೆ ಮತ್ತು ನಮ್ಮ ಜಮೀನುಗಳ ನಡುವೆ ಇರುವ ಹಾಗೂ ಅಸಲು ದಾವೆ ಸಂಖ್ಯೆ 308/19 ರ ವಾದ ಪತ್ರದಲ್ಲಿ ವರ್ಣಿಸಿರುವ

ಚಕ್ಕುಬಂಧಿಗೆ ಒಳಪಟ್ಟು 1 ನೇ ಪ್ರತಿವಾದಿಗೆ ಸೇರಿದ 20 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ 20 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಮಂಜೂರಾಗಿ ಸಾಗುವಳಿ ಚೀಟಿ ಕೊಡಲಾಗಿದ್ದು ಹಲವಾರು ವರ್ಷಗಳಿಂದ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 3–4 ವರ್ಷಗಳ ಹಿಂದೆ 1 ನೇ ಪ್ರತಿವಾದಿ ತಮ್ಮ 20 ಗುಂಟೆ ಜಮೀನಿನಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿದ್ದು ಸದರಿ ಅಡಿಕೆ ಗಿಡಗಳು ಈಗಲೂ ಇದೆ ಎಂದರೆ ಸಾಕ್ಷಿ ಸದರಿ ಗಿಡಗಳನ್ನು ನಾನು ನೆಟ್ಟಿದ್ದೇನೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಸೇರಿದ ಸದರಿ 20 ಗುಂಟೆಯನ್ನು ಲಪಟಾಯಿಸುವ ಸಲುವಾಗಿ ನಾನೇ ಅಡಿಕೆ ಗಿಡ ನೆಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಮಗೆ ಮಂಜೂರಾಗಿರುವ 1 ಎಕರೆ 20 ಗುಂಟೆ ಜಮೀನು ಮತ್ತು 1 ನೇ ಪ್ರತಿವಾದಿ ಮಂಜೂರಾಗಿರುವ 20 ಗುಂಟೆ ಜಮೀನು ಎರಡು ಬೇರೆ ಬೇರೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ 20 ಗುಂಟೆ ಜಮೀನು ಎಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಜಮೀನು ಎಲ್ಲಿ ಬರುತ್ತದೆ ಎಂದು ತೋರಿಸಲು ಅಳತೆ ಮಾಡಿಸಿಲ್ಲ ಎಂದರೆ ಸರಿ. ನಮ್ಮ ಜಮೀನು ಎಲ್ಲಿದೆ ಎನ್ನುವುದು ಗೊತ್ತಿಲ್ಲದೆ ಪ್ರತಿವಾದಿಯರ ಜಮೀನನ್ನು ಸೇರಿಸಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–1 ರಿಂದ 25 ರ ದಾಖಲೆಗಳು ದಾವಾ ಸ್ವತ್ತು ಎಲ್ಲಿದೆ ಎಂಬುವುದನ್ನು ನಿಖರವಾಗಿ ಸಾಭಿತು ಪಡಿಸುವುದಿಲ್ಲ ಎಂದರೆ ಸಾಕ್ಷಿ ಸರ್ಕಾರದವರು ಕೊಟ್ಟ ದಾಖಲೆಗಳನ್ನು ಹಾಜುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ದಾಖಲೆಗಳಿಗೂ ದಾವಾ ಸ್ವತ್ತಿಗೂ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಚಕ್ಕುಬಂಧಿ ನಮೂದಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**Sd/-**

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**